

ಪ್ರೇಮಿಗಳಾದ್ದಾಗುತ್ತದೆ. ಸಮ್ಮೇಳನದ ಪ್ರತಿ ದಿನ ಸಂಜೆ ಏಕಕಾಲದಲ್ಲಿ 12 ವೇದಿಕೆಗಳಲ್ಲಿ ಕನ್ನಡತನವನ್ನು ಪರಿಚಯಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳ ಲೋಕವೇ ಅನಾವರಣಗೊಳ್ಳುತ್ತದೆ. ವೈವಿಧ್ಯಮಯ ಕನ್ನಡ ಕಲಾ ಪ್ರಕಾರಗಳ ಪ್ರದರ್ಶನಗಳು ಆಸಕ್ತ ಕನ್ನಡಾಭಿಮಾನಿಗಳ ಮನತಣಿಸುತ್ತವೆ.

ಡಿಸೆಂಬರ್ 01 ರಿಂದ 03, ಹದಿನಾಲ್ಕನೇ ಆಳ್ವಾಸ್ ನುಡಿಸಿರಿ

ಈ ಬಾರಿಯ 14ನೇ ವರ್ಷದ ಆಳ್ವಾಸ್ ನುಡಿಸಿರಿಯು ಹಲವು ಹೊಸತನಗಳೊಂದಿಗೆ ಕನ್ನಡಾಭಿಮಾನಿಗಳ ಮುಂದೆ ಬರುತ್ತಿದ್ದು ಡಿಸೆಂಬರ್ 1, 2, 3 ರಂದು ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸುಂದರಿ ಆನಂದ ಆಳ್ವ ಆವರಣದಲ್ಲಿ ನಡೆಯಲಿದೆ. ಅನೇಕ ವಿಶೇಷತೆಗಳನ್ನು ಒಳಗೊಂಡಿರುವ ನುಡಿಸಿರಿ ಈ ಬಾರಿ ಮತ್ತೆ ಅದ್ಭುತ ಕನ್ನಡ ಸಾಹಿತ್ಯ–ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸಲು ಸಜ್ಜಾಗಿದೆ. 'ಕರ್ನಾಟಕ: ಬಹುತ್ವದ ನೆಲೆಗಳು' ಎಂಬ ಪರಿಕಲ್ಪನೆಯಡಿಯಲ್ಲಿ ನಡೆಯಲಿರುವ ಈ ಸಲದ ನುಡಿಸಿರಿಯ ಸರ್ವಾಧ್ಯಕ್ಷರಾಗಿ ಡಾ.ನಾಗತಿಗಳ್ಳಿ ಚಂದ್ರಶೇಖರ್ ಆಯ್ಕೆಯಾಗಿದ್ದು, ವಿದ್ವಾಂಸ ಡಾ.ಸಿ.ಎನ್. ರಾಮಚಂದ್ರನ್ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಸಮಗ್ರ ಕರ್ನಾಟಕದ

